**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಅರಕಲಗೂಡು**

**ಉಪಸ್ಥಿತರು ಃ-** **ಶ್ರೀ ಗಿರೀಶ.ಬಿ.ಕೆ,** ಬಿ.ಎಸ್ಸಿ. ಎಲ್.ಎಲ್.ಬಿ.,
**ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಅರಕಲಗೂಡು.**

**ದಿನಾಂಕಃ 25ನೇ ಅಕ್ಟೋಬರ್ 2013**

**ಎಫ್.ಡಿ.ಪಿ.ನಂಃ 5/2010**

ಅರ್ಜಿದಾರರು 1. ಎಂ.ಆರ್. ಸೀತಾರಾಮಯ್ಯ
ಬಿನ್ ಲೇಟ್ ಎಂ.ಎಸ್. ರಾಮಚಂದ್ರಯ್ಯ
75 ವರ್ಷ,
2. ಎಂ.ಆರ್. ಚಂದ್ರಶೇಖರ
ಬಿನ್ ಲೇಟ್ ಎಂ.ಎಸ್. ರಾಮಚಂದ್ರಯ್ಯ
59 ವರ್ಷ,
ಇಬ್ಬರೂ ಮಲ್ಲಿಪಟ್ಟಣ ಗ್ರಾಮ,
ಮಲ್ಲಿಪಟ್ಟಣ ಹೋಬಳಿ
ಅರಕಲಗೂಡು ತಾಲ್ಲೂಕು
(ಶ್ರೀ ಹೆಚ್.ಎನ್. ಸುಬ್ರಮಣ್ಯ, ವಕೀಲರು)

ವಿರುದ್ಧ

ಎದುರುದಾರರು 1. ಕೆ.ಈ. ರಮೇಶ ಬಿನ್ ಲೇಟ್ ಈರಪ್ಪ
ಕೆಳಗಳಲೆ ವಾಸ, ಕಸಬಾ ಹೋಬಳಿ
ಅರಕಲಗೂಡು ತಾಲ್ಲೂಕು
(ಶ್ರೀ ಕಿತ್ತೂರುಧರ್ಮಪ್ಪ, ವಕೀಲರು)

**ಆದೇಶ**

ಅರ್ಜಿದಾರರು ಸಿ.ಪಿ.ಸಿ. ಆದೇಶ 8 ನಿಯಮ 34ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ಎದುರುದಾರರು ಭೋಗ್ಯ ಖುಲಾಸೆ ಪತ್ರವನ್ನು ಬರೆದು ಉಪ ನೋಂದಣಾಧಿಯರ ಕಛೇರಿಯಲ್ಲಿ ನೋಂದಾಯಿಸಿ ಕೊಡಬೇಕೆಂದು ಆದೇಶಿಸಬೇಕೆಂದು ಕೋರಿರುತ್ತಾರೆ.

## 2. ಅರ್ಜಿದಾರರ ಅರ್ಜಿಯ ಪ್ರಮುಖ ಸಾರಾಂಶವೇನೆಂದರೆಃ

ಅರ್ಜಿದಾರರು ಅರ್ಜಿಯನ್ನು ಸಲ್ಲಿಸಿ, ಎದುರುದಾರರ ವಿರುದ್ಧ ಇದೇ ನ್ಯಾಯಾಲಯದಲ್ಲಿ ಒ.ಎಸ್. 212/2005 ರ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಭೋಗ್ಯ ಖುಲಾಸೆಗಾಗಿ ದಾವೆಯನ್ನು ಹೂಡಿದ್ದು, ಸದರಿ ದಾವೆಯು ಅರ್ಜಿದಾರರ ಪರವಾಗಿ ಡಿಕ್ರಿ ಮತ್ತು ಆದೇಶವಾಗಿರುತ್ತದೆ. ಎದುರುದಾರರು ಸದರಿ ದಾವೆಯ ಆದೇಶ ಮತ್ತು ಡಿಕ್ರಿಯ ವಿರುದ್ಧ ಸಿಎಲ್ ಜಡ್ಜ್ (ಹಿರಿಯ ವಿಭಾಗ) ಅರಕಲಗೂಡು ನ್ಯಾಯಾಲಯದಲ್ಲಿ ಆರ್.ಎ.475/2008 ರಲ್ಲಿ ಅಫೀಲು ಸಲ್ಲಿಸಿದ್ದರು, ಆದರೆ ಸದರಿ ಅಫೀಲನ್ನು ವಜಾ ಮಾಡಿ ನ್ಯಾಯಾಲಯದ ಆದೇಶ ಡಿಕ್ರಿಯನ್ನು ಅಂದರೆ ಒ.ಎಸ್.212/2005ರ ಆದೇಶ ಮತ್ತು ಡಿಕ್ರಿಯನ್ನು ಸ್ಥಿರಗೊಳಿಸಿರುತ್ತದೆ.

3. ನ್ಯಾಯಾಲಯವು ಆದೇಶಿಸಿರುವಂತೆ ಎದುರುದಾರರು ಅನುಸೂಚಿ ಜಮೀನಿಗೆ ಸಂಬಂಧಿಸಿದಂತೆ ಭೋಗ್ಯ ಖುಲಾಸೆ ಪತ್ರವನ್ನು ತನಗೆ ಬರೆದುಕೊಟ್ಟಿರುವುದಿಲ್ಲ. ಆದ್ದರಿಂದ ನ್ಯಾಯಾಲಯವು ನ್ಯಾಯಾಲಯದ ಆಯಕ್ತರನ್ನು ನೇಮಿಸಿ ತನಗೆ ಭೋಗ್ಯ ಖುಲಾಸೆ ಪತ್ರವನ್ನು ಬರೆದು ಉಪ ನೋಂದಾಣಾಧಿಯರ ಕಛೇರಿಯಲ್ಲಿ ನೋಂದಾಯಿಸಿ ಕೊಡಬೇಕೆಂದು ಆದೇಶ ಮಾಡಬೇಕಾಗಿ ಪ್ರಾರ್ಥಿಸುತ್ತಾರೆ.

4. ಎದುರುದಾರರು ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ. ಯಾವುದೇ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ.

5. ವಾದವನ್ನು ಆಲಿಸಲಾಯಿತು

6. ನನ್ನ ಪರಿಗಣನೆಗೆ ಬರುವ ಅಂಶಗಳು

## **ಅಂಶಗಳು**

1. ಅರ್ಜಿದಾರರು ಅರ್ಜಿಯಲ್ಲಿ ಕೇಳಿರುವಂತೆ ನಿವೃತ್ತಿ ಪಡೆಯಲು ಅರ್ಹರೆ?

2. ಏನು ಆದೇಶ

7. ಈ ಮೇಲಿನ ಅಂಶಗಳ ಆಧಾರದ ಮೇಲೆ ನನ್ನ ಪರಿಗಣನೆಗೆ ಉತ್ತರ ಕೆಳಕಂಡಂತೆ ಇರುತ್ತದೆ.

ಅಂಶಃ- 1 ಃ- ಸಕಾರಾತ್ಮಕವಾಗಿ

ಅಂಶಃ- 2 ಃ- ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗೆ

ಃಕಾರಣಗಳುಃ

8. **ಅಂಶ-1 ಃ-** ಅರ್ಜಿದಾರರು ಅರ್ಜಿಯನ್ನು ಸಲ್ಲಿಸಿ ಅಸಲು ದಾವಾ ಸಂಖ್ಯೆಃ212/2005, ದಿನಾಂಕಃ 20-12-2007 ರಂದು ಡಿಕ್ರಿ ಆಗಿರುತ್ತದೆ. ಎದುರುದಾರರು ಸದರಿ ಡಿಕ್ರಿ ಆದೇಶವನ್ನು ಪ್ರಶ್ನಿಸಿ ಆರ್.ಎ.475/2008 ರಂತೆ ಸಿಎಲ್ ಜಡ್ಜ್ (ಹಿರಿಯ ವಿಭಾಗ) ಅರಕಲಗೂಡು ನ್ಯಾಯಾಲಯದಲ್ಲಿ ಇಲ್ಲಿ ಅಫೀಲು ಸಲ್ಲಿಸಿದ್ದರು ಸದರಿ ಆರ್.ಎ. 475/2008ರ ಪ್ರಕರಣ ವಜಾ ಆಗಿರುತ್ತದೆ. ಭೋಗ್ಯದ ಹಣ ರೂ.7,000/-ಗಳನ್ನು ಎದುರುದಾರರಿಗೆ ಕೊಟ್ಟದೆ. ಆರ್.ಎ. 475/2008ರ ಪ್ರಕರಣ ವಜಾ ಆದ ನಂತರವು ಈ ನ್ಯಾಯಾಲಯದ ಅಸಲು ದಾವಾ 212/2005 ರ ಆದೇಶವನ್ನು ಎದುರುದಾರರು ಪಾಲನೆ ಮಾಡಿಲ್ಲ ಆದ್ದರಿಂದ ಆದೇಶ ಪಾಲನೆಗೆ ಅಂತಿಮ ಡಿಕ್ರಿ ಆದೇಶವನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

9. ಎದುರುದಾರರಿಗೆ ನ್ಯಾಯಾಲಯದಿಂದ ಸಮನ್ಸ್ ಕಳುಹಿಸಿದೆ. ಎದುರುದಾರರು ಶ್ರೀ ಕಿತ್ತೂರುಧರ್ಮಪ್ಪ ವಕೀಲರ ಮೂಲಕ ಹಾಜರಾಗಿರುತ್ತಾರೆ. ಮತ್ತು

ದಿನಾಂಕಃ 01-06-2013 ರಂದು ಗೈರು ಹಾಜರಾಗಿರುತ್ತಾರೆ. ಮತ್ತು ಯಾವುದೇ ವಾದವನ್ನು ಮಂಡಿಸಿರುವುದಿಲ್ಲ.

10. ಅರ್ಜಿದಾರರು ಆರ್.ಎ. 475/2008ರ ಪ್ರಕರಣದ ವಿರುದ್ಧ ಯಾವುದೇ ಅಫೀಲು ಇಲ್ಲವೆಂದು ಪ್ರಮಾಣ ಪತ್ರವನ್ನು ಸಲ್ಲಿಸಿದ್ದಾರೆ. ನಿಪಿ-1ರ ದಾಖಲೆ ಅಸಲು ದಾವಾ 212/2005 ರಲ್ಲಿ ಆಗಿರುವ ಆದೇಶ ಆಗಿದ್ದು, ಸದರಿ ಡಿಕ್ರಿ ಆದೇಶದ ಷೆಡ್ಯೂಲ್ ಸ್ವತ್ತು ಸರ್ವೆ ನಂ.105 ಮಲ್ಲಿಪಟ್ಟಣ ಗ್ರಾಮ, ಮಲ್ಲಿಪಟ್ಟಣ ಹೋಬಳಿ ಅರಕಲಗೂಡು ತಾಲ್ಲೂಕು 1 ಎಕರೆ 28 ಗುಂಟೆ ಮತ್ತು Wet land and 0-13 Acre Dry Land bounded by East:Government Halla, West: Kere Eri, South: Government Road and North: Land of Ramiah ಇರುತ್ತದೆ. ಮತ್ತು ನಿಪಿ-2 ದಾಖಲೆ ಆರ್.ಎ. 475/2008ರ ಪ್ರಕರಣ ವಜಾ ಆಗಿರುವುದು ಕಂಡುಬರುತ್ತದೆ.

11. ಅರ್ಜಿದಾರರು ನ್ಯಾಯಾಲಯದ ಅದೇಶವನ್ನು ಪಾಲನೆಯನ್ನು ಮಾಡಿಲ್ಲ ಎಂದು ಹೇಳಿರುವುದು ಎದುರುದಾರರು ನ್ಯಾಯಾಲಯದ ಆದೇಶವನ್ನು ಪಾಲನೆ ಆಗಿದೆ ಎಂಬ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ, ಆದ್ದರಿಂದ ಅಂಶ ಃ1 ಅನ್ನು ಸಕರಾತ್ಮಕವಾಗಿ ಉತ್ತರಿಸಿದ್ದೇನೆ.

12. **ಅಂಶ-2ಃ-** ಈ ಮೇಲೆ ಚರ್ಚಿಸಲಾದ ಕಾರಣಗಳಿಗಾಗಿ ಈ ಕೆಳಕಂಡಃ

**ಃ ಆದೇಶ ಃ**

ಅರ್ಜಿದಾರರ ಅರ್ಜಿಯನ್ನು ಪುರಸ್ಕರಿಸಿದೆ.

ನ್ಯಾಯಾಲಯದ ಆಯುಕ್ತರನ್ನಾಗಿ ಆಡಳಿತ ಶಿರಸ್ತೇದಾರ್‌ರವರನ್ನು ನೇಮಕ ಮಾಡಿದೆ.

ಷೆಡ್ಯೂಲ್ ಸ್ವತ್ತಿನ ಭೋಗ್ಯದ ಖುಲಾಸೆ ಪತ್ರವನ್ನು ಬರೆದು ಕೊಡುವಂತೆ ಆದೇಶಿಸಿದೆ.

Accordingly F.D.P. disposed off.

(ಈ ಮೇಲ್ಕಂಡ ತೀರ್ಪಿನ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಬೆರಳಚ್ಚಿಸಿದ ನಂತರ ತಪ್ಪುಗಳನ್ನು ಸರಿಪಡಿಸಿ ನಂತರ ನನ್ನ ಸಹಿಯೊಂದಿಗೆ ಈ ದಿನ ಅಂದರೆ 25ನೇ ಅಕ್ಟೋಬರ್ 2013 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

(ಗಿರೀಶ. ಬಿ.ಕೆ)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ಅರಕಲಗೂಡು.